ಮತ್ತಷ್ಟು ಕಷ್ಟ ಕೊಟ್ಟು ಪರೀಕ್ಷಿಸುತ್ತಾನಂತೆ. ಎಂದೆಂದೂ ಬರದ ಕ್ಲಾಸ್‌ಮೇಟ್ ಹೇಮಾವತಿ ಹಾಯ್ ಎನ್ನುತ್ತ ಬಂದು 'ಇವೊತ್ತಾದ್ರೂ ಸ್ವೀಟ್ ಕೊಡಿಸುತ್ತೀರಾ. ಡಿಬೇಟಲ್ಲಿ ಗೆದ್ದು ಎಷ್ಟು ದಿವಸ ಆಯ್ತು... ಸುಮತೀನ ಹುಡುಕಿಕೊಂಡು ಬಂದೆ. ಅವಳೆಲ್ಲೋ ಕಾಣಿಸ್ತಿಲ್ಲ. ನೀವು ಸಿಕ್ಕಿರಲ್ಲ ಒಳ್ಳೇದಾಯ್ತು' ಎಂದು ಮುಂದೆ ಕೂತಳು. ಇದನ್ನೇ ಕಾಯುತ್ತಿದ್ದವನಂತೆ ನನ್ನ ಗೆಳೆಯ 'ನೀವು ಮಾತಾಡ್ತಾ ಇರ್ರೋ.. ನಾನು ಬರ್ತೀನಿ' ಎಂದು ಎದ್ದು ಹೋದ. ದುರುಳ. ದುಡ್ಡು ತರಲು ಎದ್ದನೋ, ಪಲಾಯನ ಮಾಡಿದನೋ ಒಂದೂ ಗೊತ್ತಾಗುತ್ತಿಲ್ಲ. ಭೂಮಿ ಬಾಯಿ ಬಿಡುವುದೆಂದರೆ ಹೀಗೆ ಎಂದು ಪ್ರಾತ್ಯಕ್ಷಿಕೆ ನಡೆದಂತಾಯಿತು. ಯಾರು ಮಾಡಿದ ಪುಣ್ಯವೋ ಅಷ್ಟರಲ್ಲಿ ಮೊದಲ ಗೆಳೆಯ ಕಾಣಿಸಿದ. ಅವನ ಕೈಯಲ್ಲಿ ನೋಟಿತ್ತು. ಸದ್ಯ, ಭೂಕಂಪ ಸಂಭವಿಸಲಿಲ್ಲ.

ಹಾಗಂತ ಬರೀ ದುಡ್ಡಿದ್ದರೆ ಎಲ್ಲವೂ ಅಂತಲೂ ಹೇಳ ಬರುವುದಿಲ್ಲ. ದುಡ್ಡೂ ಇದ್ದು, ಕನಸೂ ಇದ್ದು, ವೇಳೆಯೂ ಇದ್ದು ಹೋಟೆಲ್ ಹುಡುಕುವಲ್ಲೇ ಹನಿಮೂನ್ ಮುಗಿದ ಕತೆಯನ್ನು ನೀವೆಲ್ಲಾದರೂ ಕೇಳಿರುವಿರಾ? ಇಲ್ಲ. ಹೇಳಿದ್ದರೆ ನಾನೇ ಹೇಳಿರಬೇಕಿತ್ತು. ಹೋಗಿದ್ದು ಕೇರಳಕ್ಕೆ. ಅಲ್ಲಿ ಮೀನನ್ನೂ ತರಕಾರಿ ಎಂದೇ ಭಾವಿಸುತ್ತಾರೆ. ಮೀನು ಇರದ, ನಾನ್ ವೆಜ್ ಅಲ್ಲದ, ಚಿಟಿಕೆಯಷ್ಟೂ ಬೆಳ್ಳುಳ್ಳಿಯನ್ನು ಉಪಯೋಗಿಸದ, ದಪ್ಪ ಅಕ್ಕಿ ಉಪಯೋಗಿಸದ, ಅಡ್ಡವಾಸನೆಯಿಲ್ಲದ ಹೋಟೆಲನ್ನು ನನ್ನ ಪತ್ನಿಗಾಗಿ ಹುಡುಕುವುದೇ ನನ್ನ ಹನಿಮೂನಿನ ಮುಖ್ಯ ಕಾಯಕವಾಯಿತು. ಗಿಡ, ಮರ, ಪಾರ್ಕುಗಳನ್ನು ನೋಡಿಯೂ ನೋಡದಂತೆ ದಾಟಿ, ಕೆರೆ, ತೊರೆ, ಜಲಪಾತಗಳನ್ನು ಅವುಗಳ ಪಾಡಿಗೆ ಬಿಟ್ಟು, ನುಗ್ಗಿ ಬರುತ್ತಿದ್ದ ಡ್ಯುಯೆಟ್ ಸಾಂಗ್‌ಗಳನ್ನು ಪೆಥಾಸನಂತೆ ಮನಸ್ಸಿನೊಳಗೆ ಗುನುಗಿಕೊಳ್ಳುತ್ತ... ಸಸ್ಯಾಹಾರಿ ಹೋಟೆಲನ್ನಾದರೂ ಹುಡುಕಬಹುದು. ಆದರೆ ಊರಿಗೆ ಊರೇ ಮೀನಿನ ಅಡ್ಡವಾಸನೆಯಲ್ಲಿರುವಾಗ ಈ ಕ್ಷುದ್ರ ಬೆಳ್ಳುಳ್ಳಿಯನ್ನು ಗುರುತಿಸುವವರಾದರೂ ಯಾರು ಇದ್ದಾರೆ? ಇದ್ದಾರೆ. ಅಂಥವರು ನನ್ನ ಪಕ್ಕದಲ್ಲಿಯೇ ಇದ್ದಾರೆ. ಅಂದಿನಿಂದ ಶುರುವಾದುದು ಇಪ್ಪತ್ತೈದು ವರ್ಷವಾದರೂ ಇನ್ನೂ ಮುಂದುವರಿದಿದೆ. ಯಾವ ಊರಿಗೆ ಹೋದರೂ ಇದನ್ನು ಮೊದಲು ಹುಡುಕುವುದೇ ನನ್ನ ವೈವಾಹಿಕ ಧ್ಯೇಯ. ಸಪ್ತಪದಿಯ ಒಪ್ಪಂದ. ಇದರಲ್ಲಿ ನಾನು ಗೆದ್ದಿದ್ದೇನೆ ಎಂಬುದೇ ನಮ್ಮ ಸಮರಸ ಬಾಳ್ವೆಯ ಗುಟ್ಟು. ಈ ದೃಷ್ಟಿಯಿಂದ ಒಡಿಸ್ಸಾ ರಾಜಧಾನಿ ಭುವನೇಶ್ವರ ಕಂಡರೆ ನನಗೆ ವಿಶೇಷ ಪ್ರೀತಿ. ಅಲ್ಲಿ ಅನೇಕ ಹೋಟೆಲುಗಳ ಬೋರ್ಡ್‌ನಲ್ಲಿಯೇ '**without Garlic**' ಎಂದೂ ಸೇರಿಸಿಬಿಟ್ಟಿದ್ದಾರೆ. ಯಾವ ಪುಣ್ಯಾತ್ಮರಿಗೆ ಹೊಳೆಯಿತೋ. ಆದರೆ ನಾವು ಭುವನೇಶ್ವರಕ್ಕೆ ಹೋದಾಗ ಮದುವೆಯಾಗಿ ಇಪ್ಪತ್ತೆರಡು ವರ್ಷ ಕಳೆದಿತ್ತು.

ಹೀಗೆ ಒಂದೊಂದು ಊರಿನಲ್ಲಿ ಒಂದೊಂದು ಸ್ಪೆಷಲ್. ಯಾವುದೋ ದೇಶದಲ್ಲಿ ಮಿನಿಸ್ಕರ್ಟ್ ಧರಿಸಿದ್ದಲ್ಲಿ ಮಾತ್ರ ಒಂದು ಹೋಟೆಲಲ್ಲಿ ಪ್ರವೇಶವಂತೆ. ಅಲ್ಲಿ ಪುರುಷರ ಕತೆಯೇನೋ. ಮರೆತು ಹೋಗಿದೆ. ಚೀನಾದ ಜೆಂಗ್ಝುಹು ಪ್ರಾಂತದ ಕೊರಿಯನ್ ಶೈಲಿಯ ಹೋಟೆಲೊಂದರಲ್ಲಿ '**Free meal for good looking**' (ಸುಂದರವಾಗಿರುವವರಿಗೆ ಪುಕ್ಕಟೆ ಊಟ) ಎಂಬ ಆಫರ್ ಇದೆಯಂತೆ. ಸೌಂದರ್ಯ ತಜ್ಞರು ಕಣ್ಣು, ಮೂಗು, ಗದ್ದ ಎಲ್ಲ ಪರಿಶೀಲಿಸಿ 'ಎಸ್' ಅಂದರೆ ಮಾತ್ರ ಪುಕ್ಕಟೆ ಊಟವಂತೆ. ಎಷ್ಟೇ ವಿರೋಧ ಬಂದರೂ ಈ ಆಫರ್ ನಿಲ್ಲಿಸುವುದಿಲ್ಲ ಅಂತ ಹೋಟೆಲ್‌ನ ಕಳೆದ ವರ್ಷದ ಪ್ರಕಟಣೆ. ಈಗೇನಾಗಿದೆಯೋ ಗೊತ್ತಿಲ್ಲ. 'ಹೀಗೂ ಉಂಟೇ' ಕಾರ್ಯಕ್ರಮದ ನಿರ್ಮಾತೃಗಳು ಪರಿಶೀಲಿಸಬಹುದು. ಗ್ರಾಹಕರೇ